Construction of Bridge across Suvarnavathy River at Kannagal Chamarajanagar Taluk.

149 SRI M. MADAIAH (Santhemaranahalli).—Will the Minister for Public Works be pleased to state.-

(a) whether it is not a fact that an assurance was given on 27-6-1980, while giving replies to starred question No. 449 that an high level cause way road will be constructed during the year 1981-82 to facilitate movement of people and cattle beyond pickup of Suvarnavathi river near Kanne village, Chamarajanagar Taluk;

(b) whether it is not a fact that the Superintending Engineer Mysore Circle and the Executive Engineer, Chamarajanagar Division and considered this work as most urgent and had included in the Budget Estimate of 1981-82.

(c) whether it has not been decided at the meeting convened at the chambers of the Minister for Public Works that the above work be given first preference;

(d) whether it is not a fact that the people were disappointed for having omitted this item of work in the printed Budget Estimates for the year 1981-82;

(e) whether it is possible to include this work in the Current years Supplimentary Budget to facilitate the people by completing this work?

SRI KAGODU THIMMAPPA (Minister for Public Works)

(a) It was assured that this work will be taken up taking into consideration the financial position.

(b) The Superintending Engineer and the Executive Engineer had recommended for inclusion of this work in the Budget Estimates of 1981-82.

(c) No final decision has been taken in this behalf.

(d) and (e) Donot arise in view of reply to clause (c).

ಶ್ರೀ ಎಂ. ಮಾದಯ್ಯ.—ಅಧ್ಯಕ್ಷರೇ ನನ್ನ ಪ್ರಶ್ನೆ ನಂ. (ಉ) ಗೆ ಉತ್ತರವಾಗಿ ಅಂತಿಮ ತೀರ್ಮಾನವನ್ನು ಇನ್ನೂ ಕೈಗೊಂಡಿಲ್ಲವೆಂದು ಉತ್ತರವನ್ನು ಕೊಡಲಾಗಿದೆ, ದಿನಾಂಕ ೫-೨-೧೯೮೧ ರಲ್ಲಿ ಮಾನ್ಯ ಲೋಕೋಪಯೋಗಿ ಇಲಾಖೆಯ ಸಚಿವರ ಕೊಠಡಿಯಲ್ಲಿ ನಡೆದ ಮೀಟಿಂಗ್‌ನಲ್ಲಿ ಈ ಕೆಲಸಕ್ಕೆ ಆಧ್ಯತೆಯನ್ನು ಕೊಟ್ಟು ಮಾಡಿಸಲಾಗುವುದೆಂದು ಹೇಳಿದ್ದರು. ಇನ್ನು ತೀರ್ಮಾನ ತೆಗೆದು ಕೊಂಡಿಲ್ಲವೆಂದು ಹೇಳಿದರೆ, ತೀರ್ಮಾನವನ್ನು ಯಾವಾಗ ತೆಗೆದುಕೊಳ್ಳುತ್ತೀರಿ?

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಉಪಾಧ್ಯಕ್ಷರೇ ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ರಾಜ್ಯದ ಎಲ್ಲಾ ಭಾಗಗಳಲ್ಲೂ ಕೂಡ ಶಾಸಕರ ಮನವಿಯ ಮೇರೆಗೆ ಕೆಲವು ಕೆಲಸಗಳನ್ನು ಮಾಡಿ ಕೊಡಬೇಕೆಂದು ನಾವು ಪಟ್ಟಿಮಾಡಿದ್ದೇವೆ. ಸರ್ಕಾರ ಈ ವಿಷಯದ ಬಗ್ಗೆ ತೀರ್ಮಾನ ತೆಗೆದುಕೊಳ್ಳುವ ಹಂತದಲ್ಲಿದೆ. ತೀರ್ಮಾನ ತೆಗೆದುಕೊಂಡ ತಕ್ಷಣ ಈ ಕೆಲಸವನ್ನು ತೆಗೆದುಕೊಳ್ಳುತ್ತೇವೆ.

ಶ್ರೀ ಎಂ. ಮಾದಯ್ಯ.—ನನ್ನ ಕ್ಷೇತ್ರದ ಕೆಲಸ ಕಾರ್ಯಗಳನ್ನು ಸರಿಯಾಗಿ ಮಾಡಿಕೊಡಬೇಕೆಂದು ನಾನು ಮೂರು ವರ್ಷಗಳಿಂದಲೂ ಒತ್ತಾಯ ಮಾಡುತ್ತಿದ್ದರೂ ಕೂಡ, ಕೆಲಸಗಳು ಆಗಿಲ್ಲ. ನನ್ನ ಕ್ಷೇತ್ರದ ಮತದಾರರು ನೀವು ಈ ಕೆಲಸ ಮಾಡದಿದ್ದರೆ you are unfit to be called as a Member. You must tender your resignation ಎಂದು ಕೇಳುತ್ತಾರೆ. ನಾನು ಅದಕ್ಕೆ ಒಪ್ಪಿಕೊಂಡಿದ್ದೇನೆ. ಆದ್ದರಿಂದ ಮಾನ್ಯಮಂತ್ರಿಗಳು ನನ್ನ ಸದಸ್ಯತ್ವವನ್ನು ಉಳಿಸಂತ್ತಿರೋ ಅಥವಾ ಮನೆಗೆ ಕಳುಹಿಸುತ್ತೀರೋ ಎನ್ನುವುದನ್ನು ದಯವಾಡಿ ತಿಳಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ಮಾನ್ಯ ಸದಸ್ಯರು ಹೇಳಿರತಕ್ಕ ಕೆಲಸಗಳನ್ನು ಗಮನದಲ್ಲಿಟ್ಟು ಕೊಂಡು ಬೇಗ ಪೂರೈಸಿಕೊಡಲು ಪ್ರಯತ್ನ ಮಾಡುತ್ತೇನೆ. ಹಣ ಕಾಸಿನ ಪರಿಸ್ಥಿತಿಯನ್ನು ನೋಡಿ ಕೊಂಡು ತೀರ್ಮಾನಕ್ಕೆ ಬರಬೇಕಾಗಿದೆ, ಈ ಕೆಲಸ ಕಾರ್ಯಗಳ ಬಗೆ ಮಾನ್ಯ ಸದಸ್ಯರಿಗೆಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನನಗೂ ಇದೆ. ಸರ್ಕಾರ ಇದರ ಬಗ್ಗೆ ವಿಶೇಷ ಗಮನಹರಿಸಿ ಕೆಲಸ ಮಾಡುತ್ತದೆ ಎನ್ನುವ ಭರವಸೆಯನ್ನು ಕೊಡಬಲ್ಲೆ.

ಶ್ರೀ ಎಂ. ಮಾದಯ್ಯ.— ಈ ವರ್ಷ ಆ ಕೆಲಸಗಳನ್ನು ಮಾಡಿಸುತ್ತೀರೋ ಅಥವಾ ನನ್ನ ರಾಜೀನಾಮೆ ಕೊಡಿಸುತ್ತೀರೋ?

ಶ್ರೀ ಕಾಗೋಡು ತಿಮ್ಮಪ್ಪ.—ಈ ಕೆಲಸಗಳಿಗೋಸ್ಕರ ಮಾನ್ಯ ಸದಸ್ಯರು ರಾಜೀನಾಮೆಯನ್ನು ಕೊಡುವ ಅಗತ್ಯವಿಲ್ಲ. ಮಾನ್ಯ ಸದಸ್ಯರಿಗೆ ಅಂತಹ ತೊಂದರೆ ಬಂದರೆ ಏಂಡಿತ ಮಾಡಿಸಿಕೊಡುತ್ತೇನೆ.

ಉಪಾಧ್ಯಕ್ಷರು.—ಪ್ರಶ್ನೆ ನಂ. ೭೯ (೧೫೦) ಮಾನ್ಯ ಸದಸ್ಯರಾದ ಎಸ್. ಎಚ್. ನಲವಾಗಲ್ ಗೈರುಹಾಜರಾಗಿರುತ್ತಾರೆ.

Collection of Betterment Tax from the Achkatdars of Thimmalapura Tank

237 SRI T. B. JAYACHANDRA (Kallambella).—Will the Minister for Revenue be pleased to state.—

(a) whether it is a fact that the betterment tax is being collected from the achkatdars of Thimmalapura tank near Huliyar, Tumkur district;

(b) whether it is not a fact that Government has already waived the entire betterment tax collection from the above achkatdars

(c) If so, the reasons why the authorities have resolved to collection of this tax?

SRI MALLIKARJUNA M. KHARGE (Minister for Revenue).—

(a) No.

(b) No.

(c) Does not arise.

ಶ್ರೀ ಟಿ. ಬಿ. ಜಯಚಂದ್ರ.—ತುಮಕೂರು ಜಿಲ್ಲೆಯ ಹುಳಿಯೂರು ಬಳಿಯ ತಿಮ್ಮಲಾಪುರದ ಕೆರೆಯ ಆಚ್ಚುಕಟ್ಟು ಎಷ್ಟು? ಈ ಆಚ್ಚುಕಟ್ಟಿಗೆ ಎಲ್ಲಿಯವರೆಗೆ ನೀರು ಬದಗಿಸುತ್ತೀರಿ?

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಕೇಳುವ ವಿವರ ನನ್ನ ಹತ್ತಿರ ಇಲ್ಲ. ಅವರು ಕೇಳಿರುವ ಪ್ರಶ್ನೆ ಈ ರೀತಿ ಇದೆ, whether it is a fact that betterment tax